# ಬೆಟ್ಟಕ್ಕೆ ಚಳಿಯಾದಡೆ

ಈಚೆಗೆ ಶಿಕ್ಷಣ ಕ್ಷೇತ್ರದಲ್ಲಿ ನಡೆದ ಎರಡು ಘಟನೆಗಳು ನಮ್ಮನ್ನು ಬೆಚ್ಚಿಬೀಳುವಂತೆ ಮಾಡಿದೆ. ಘಟನೆ ಒಂದು: ಉತ್ತರ ಭಾರತದ ಶಾಲೆಯೊಂದರಲ್ಲಿ ಶಿಕ್ಷಕಿಯೊಬ್ಬರು, ತರಗತಿಯಲ್ಲಿ ತಪ್ಪೆಸಗಿದ ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾರ್ಥಿಯ ಕೆನ್ನೆಗೆ ಹೊಡೆಯುವಂತೆ ಉಳಿದ ಧರ್ಮದ ವಿದ್ಯಾರ್ಥಿಗಳಿಗೆ ಹೇಳಿದ್ದಾರೆ. ತಮ್ಮ ಶಿಕ್ಷಕಿಯ ಆಜ್ಞೆಯನ್ನು ಪಾಲಿಸಿದ ಉಳಿದವರು ಆ ವಿದ್ಯಾರ್ಥಿಯ ಕೆನ್ನೆಗೆ ಹೊಡೆದಿದ್ದಾರೆ.

ಘಟನೆ ಎರಡು: ದಕ್ಷಿಣ ಭಾರತದ ಕಾಲೇಜೊಂದರಲ್ಲಿ ವಿದ್ಯಾರ್ಥಿಯೊಬ್ಬ ಕೈಲ್ಲಿ ಕತ್ತಿ ಝುಳಪಿಸುತ್ತಾ ತನಗೆ ತಿಳಿ ಹೇಳಿದ ಅಧ್ಯಾಪಕರನ್ನು ನಿಲ್ಲಿಸಿ ಉಚ್ಚ ಧ್ವನಿಯಲ್ಲಿ ಬೆದರಿಕೆ ಹಾಕಿದ್ದಾನೆ. ನಾವು ಕೇಳಬಾರದ ಮತ್ತು ನೋಡಬಾರದ ಇಂತಹ ದೃಶ್ಯಗಳು ನಮ್ಮ ಕಣ್ಣಮುಂದೆಯೇ ಲಜ್ಜಾಹೀನವಾಗಿ ಕಾಣಿಸಿಕೊಳ್ಳುತ್ತಿವೆ. ನಿತ್ಯವೂ ತನ್ನ ಪಕ್ಕದಲ್ಲೇ ಕುಳಿತುಕೊಳ್ಳುವ ತನ್ನ ಗೆಳೆಯನೊಬ್ಬ ಶಿಕ್ಷೆಯ ರೂಪದಲ್ಲಿ ಹೀಗೆ ಕೆನ್ನೆಗೆ ಹೊಡೆದಾಗ ಏಟು ತಿಂದವನ ಹೃದಯದಲ್ಲಾದ ನೋವು, ಅವಮಾನ, ದುಃಖ ಎಲ್ಲವನ್ನೂ ಆ ವಿದ್ಯಾರ್ಥಿ ಭಾಷೆಯಲ್ಲಿ ಹೇಳಿ ಮುಗಿಸಲು ಸಾಧ್ಯವೇ? ಈ ದೃಶ್ಯದ ಮುಂದಿನ ಭಾಗವೇ ಕೆನ್ನೆಗೆ ಹೊಡೆದ ಇದೇ ವಿದ್ಯಾರ್ಥಿ ಈಗ ಕೈಯಲ್ಲಿ ಮಚ್ಚು ಹಿಡಿದು ಅಧ್ಯಾಪಕನ ಮುಂದೆ ನಿಂತಿದ್ದಾನೆ ಎನಿಸುತ್ತದೆ! ಹೊಸ ಭಾರತ ಸೃಷ್ಟಿಸುತ್ತಿರುವ ಆ ದೃಶ್ಯಗಳು ಇವು. ನಾವೆಲ್ಲರೂ ಬಾಳಿ–ಬದುಕಿದ ಮಾನವೀಯ ಸಮಾಜವೊಂದು ಕಣ್ಮರೆಯಾಗುತ್ತಿರುವ ಕಣ್ಣನ್ನೆಯೋ ಎನ್ನುವಂತೆ ಭಾಸವಾಗುತ್ತಿದೆ.

ಈ ಬಗೆಯ ಕ್ರಿಯೆಗಳೆಲ್ಲ ಸಮಾಜದ ಹೃದಯಕ್ಕೆ ಆಳವಾದ ಗಾಯವನ್ನು ಉಂಟುಮಾಡುತ್ತಾ ಹೋಗುತ್ತಿರುತ್ತವೆ. ನಮ್ಮೊಂದಿಗೆ ಸ್ನೇಹ ಹಾಗೂ ಉದಾರತೆಯಿಂದ ಇರುವವರನ್ನು ಪರಮ ಶತ್ರುವಿನಂತೆ ಕಾಣುತ್ತಾ ಅವರಿಗೆ ದೈಹಿಕ–ಮಾನಸಿಕ ಹಿಂಸೆಯನ್ನು ಕೊಟ್ಟು ವಿಕೃತ ಆನಂದವನ್ನು ಪಡೆಯುವ ಸ್ಥಿತಿಗೆ ಸಮಾಜ ಹೋಗಬಾರದು. ನ್ಯಾಯದ ದೃಷ್ಟಿಯಿಂದ ಈ ನಡತೆ ಹೀನಾಯವಾದದ್ದು. ಪ್ರೀತಿಸುವ ಹೃದಯವನ್ನು ಕಠೋರವನ್ನಾಗಿಸಿಕೊಂಡು ಸ್ವಯಂ ಹಿಂಸೆಪಡುವ ವಿಧಾನ ಇದು. ಶಿಕ್ಷಣ ಎಂಬುದು ಹೃದಯವನ್ನು ವಿಸ್ತಾರಗೊಳಿಸುವುದು ಎಂಬುದನ್ನು ಮರೆತಾಗ ಇಂತಹ ಘಾತುಕತನಗಳು ನಡೆಯುತ್ತವೆ. ಸಮಾಜವು ಇಂತಹ ವಿನಾಶದ ಅಂಚಿಗೆ ಬರಬಾರದು ಎಂಬುದೇ ಸಮಾಜವನ್ನು ಪ್ರೀತಿಸುವವರ ಪ್ರಾರ್ಥನೆ.

ಶಿಕ್ಷಕರನ್ನು, ವಿದ್ಯಾರ್ಥಿಗಳನ್ನು, ದೇಶವನ್ನು ಪ್ರೀತಿಸುವ ಉದಾರ ಮನಸ್ಸಿನವರ ಹೃದಯಬಡಿತ ತೀವ್ರವಾಗುವ ಘಟನೆಗಳು ಇವು! ಹೇಗೋ ಈ ಎರಡು ಘಟನೆಗಳು ವಿವೇಕವಂತರ ಮಧ್ಯಸ್ಥಿಕೆಯಿಂದ ತಣ್ಣಗಾಗಿವೆ. ಆದರೆ ಆಳವಾಗಿ ಯೋಚಿಸಿದಲ್ಲಿ ಈ ಘಟನೆಗಳ ಮೂಲ ಕರ್ತೃ ಮತ್ತು ನಿರ್ದೇಶನ ನಮ್ಮ ಹೊಸ ಭಾರತದ ಮಿದುಳಿನಲ್ಲಿ ಆಳವಾಗಿ ಬೇರೂರುತ್ತಿರುವ ಮತೀಯ ದ್ವೇಷ, ಧಾರ್ಮಿಕ ಅಸಹನೆ ಮತ್ತು ವಿಭಜಕ ತತ್ತ್ವವೇ ಆಗಿದೆ. ಈ ಮೂಲಕ ತರಗತಿಯಲ್ಲಿ ಧರ್ಮನಿರಪೇಕ್ಷಕರಾಗಿರಬೇಕಿದ್ದ ಶಿಕ್ಷಕರೂ ಸಹ ತಮ್ಮೊಳಗೆ ಸುಪ್ತವಾಗಿರುವ ಧಾರ್ಮಿಕ ಅಸಹನೆಯನ್ನು ಹೊರಹಾಕುತ್ತಾ, ಸಮಗ್ರ ಶಿಕ್ಷಣ ವ್ಯವಸ್ಥೆಯನ್ನೇ ಮತೀಯ ದ್ವೇಷದ ಕೊಂಡವನ್ನಾಗಿಸುತ್ತಿರುವುದು ನಿಜಕ್ಕೂ ದಿಗಿಲು ಉಂಟುಮಾಡುತ್ತದೆ! ನಮ್ಮ ಸಾರ್ವಜನಿಕ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಕಾಲೂರಿರುವ ಮತೀಯ ದ್ವೇಷದಿಂದಾಗಿ ಇಂತಹ ಘಟನೆಗಳು ಸಮಾಜವನ್ನು ವ್ರಣದಂತೆ ವ್ಯಾಪಿಸಿಕೊಳ್ಳುತ್ತಿರುವುದನ್ನು ಅಲ್ಲಗಳೆಯಲಾಗದು!

ಶಿಕ್ಷಣ ಎನ್ನುವುದು ಎಲ್ಲ ಧರ್ಮೀಯರೂ, ವಿಭಿನ್ನ ವಿಚಾರಧಾರೆಯವರೂ ಪರಸ್ಪರ ಗೌರವ ಹಾಗೂ ಸಹಿಷ್ಣುತೆಯಿಂದ ಬಾಳುವಂತಹ ಸಮಾಜ ನಿರ್ಮಾಣ ಮಾಡುತ್ತದೆ ಎನ್ನುವುದು ನಮ್ಮೆಲ್ಲರ ನಂಬಿಕೆಯಾಗಿತ್ತು! ಆದರೆ ಇಂತಹ ಘಟನೆಗಳು ನಮ್ಮ ನಂಬಿಕೆಯನ್ನೇ ಹುಡಿಮಾಡಿವೆ. ಎಲ್ಲರೂ ಒಗ್ಗೂಡಿ ಬಾಳುವಂತಹ ವಿಶ್ವವ್ಯಾಪಿ ತತ್ತ್ವವನ್ನು ಬೋಧಿಸಬೇಕಾಗಿದ್ದ ಶಿಕ್ಷಕ ಸಮುದಾಯದ ಕೆಲವರು ಎಲ್ಲ ಧರ್ಮೀಯರೂ ಬಾಳಲು ಅನರ್ಹವಾದ ಸಮಾಜವನ್ನು ಸೃಷ್ಟಿಸುತ್ತಿರುವುದು ದೇಶದ ಆತ್ಮ ಮೆಚ್ಚುವ ಕಾರ್ಯವಲ್ಲ. ಈಗಾಗಲೇ ಕೆರಳಿರುವ ಮತೀಯ ಭಾವನೆಗಳನ್ನು ಶಾಲೆಗಳಲ್ಲಿರುವ ಹಾಲುಗಲ್ಲದ ಹಸುಳೆಗಳ ಮೇಲೆ ಪ್ರಯೋಗ ಮಾಡುವುದು ಹೀನ ಕಾರ್ಯವೆಂದೇ ನಾವು ಪರಿಗಣಿಸಬೇಕಾಗುತ್ತದೆ!

ಈ ಘಟನೆಗಳು ಏಕಕಾಲಕ್ಕೆ ಒಂದು ಸರಳ ಸತ್ಯವನ್ನು ಹೇಳುತ್ತಿವೆ. ಶಿಕ್ಷಣವು ಕೆಲವು ಸಲ ನಿರ್ದಯಿಯೂ, ಕ್ರೂರಿಯೂ ಆಗಿರಬಲ್ಲದು! ಆದರೆ ಮುಖ್ಯವಾಗಿ ಶಿಕ್ಷಣವು ಕರುಣೆ, ಮೈತ್ರಿ ಭಾವವನ್ನು ಕಲಿಸುವವನ ಮತ್ತು ಕಲಿಯುವವನ ಒಳಗೆ ಸದಾ ಹರಿಸುತ್ತಲೇ ಇರುತ್ತದೆ. ಶಿಕ್ಷಿತರಾಗಿದ್ದ ಮಾತ್ರಕ್ಕೆ ಸಮಾಜ ಸುಸ್ಥಿರವಾಗಿರುವುದಿಲ್ಲ! ಅದು ಎಲ್ಲ ಜೀವಿಗಳ ಬಗ್ಗೆಯೂ ಕಾರುಣ್ಯ, ದಯಾಳುವೂ ಆಗಿದ್ದಾಗ ಮಾತ್ರ ಸಮಾಜ ಹೆಚ್ಚು ಸಹ್ಯವೂ ಹಾಗೂ ಸುಖಿಯೂ ಆಗಿರುತ್ತದೆ. ಇಂತಹ ಮಾನವೀಯ ಸಮಾಜವನ್ನು ನಿರ್ಮಾಣ ಮಾಡಲೆಂದೇ ಸಾವಿತ್ರಿಬಾಯಿ ಫುಲೆ ಅವರಂತಹ ನೂರಾರು ಶಿಕ್ಷಕರು ತಮ್ಮ ಬದುಕನ್ನೇ ಮುಡಿಪಾಗಿಟ್ಟದ್ದರು ಎನ್ನುವುದನ್ನು ಕಲಿಸುವವರು ಮರೆಯಬಾರದು! ಇವೆಲ್ಲವೂ ನಮ್ಮಲ್ಲಿ ಶಿಕ್ಷಕರಿಗೂ ಶಿಕ್ಷಣದ ಅವಶ್ಯಕತೆ ಇದೆ ಎನ್ನುವುದನ್ನು ಮನದಟ್ಟುಮಾಡಿಕೊಡುತ್ತವೆ.

ಮತ–ಧರ್ಮದ ಬಗ್ಗೆ ದ್ವೇಷ, ಅಸಹಿಷ್ಣುತೆ ಹೆಚ್ಚುತ್ತಾ ಹೋದಂತೆ, ನಮ್ಮೊಳಗೆ ಸುಪ್ತವಾಗಿರುವ ಹಿಂಸೆಯು ಭೀಭತ್ಸವಾಗುತ್ತಾ ನಮ್ಮೆದೆಯನ್ನು ಸುಡುಗಾಡನ್ನಾಗಿ ಮಾಡುತ್ತದೆ. ಆಗ ಕಲಿಸುವವನ ಎದೆಯೊಳಗೂ, ಕಲಿಯುವವನ ಎದೆಯೊಳಗೂ ಮಾನವೀಯತೆಯ ಒರತೆ ಬತ್ತಿಹೋಗುತ್ತದೆ. ಆಗ ಇಂತಹ ಅಸಹನೀಯ ಕೃತ್ಯಗಳು ಯಾವ ಎಗ್ಗೂ ಇಲ್ಲದೆ ನಮ್ಮ ನಡುವೆ ಜರುಗುತ್ತಿರುತ್ತವೆ. ಕರುಣೆ, ದಯೆ ಇಲ್ಲದ ಸಮಾಜವನ್ನು ಕುರಿತು ಜಿಡ್ಡು ಕೃಷ್ಣಮೂರ್ತಿ ‘ಪ್ರೀತಿಯಿಲ್ಲದ ಸಮಾಜವು ನದಿಗಳಿಲ್ಲದ ನಾಡಿನಂತೆ ಅದು ಮರುಭೂಮಿ’ ಎಂದು ಹೇಳಿದ್ದು.

‘ಎಲ್ಲ ಧರ್ಮದ ಮೂಲತತ್ತ್ವ ಸಮಾನತೆ’ ಎಂದು ಹೇಳುತ್ತಲೇ ಅಂತಿಮವಾಗಿ, ನೂರು ಮತದ ಹೊಟ್ಟ ತೂರಿ ಮನುಜ ಮತದ ಪಥದಲ್ಲೇ ನಡೆಯಬೇಕು ಎನ್ನುವುದನ್ನು ಶಿಕ್ಷಣ ನೀಡುವವರು ಮತ್ತು ಶಿಕ್ಷಣವನ್ನು ಪಡೆಯುವವರು ತಿಳಿದಿರಬೇಕು. ಶಿಕ್ಷಣವು ಅಂಗೀಕರಿಸಿರುವ ಸಾಮಾನ್ಯ ತಿಳಿವು ಎಂದರೆ, ಮಾನವ ಪ್ರೀತಿ, ನಿಸರ್ಗದೊಡನೆ ಕೆಡುಕಿಲ್ಲದೆ ಬಾಳುವುದು ಮತ್ತು ಮತ್ತೊಬ್ಬರ ಸ್ವಾತಂತ್ರ್ಯ ಹರಣಕ್ಕೆ ಕೈ ಹಾಕದಿರುವುದು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಸಂಸ್ಕೃತಿಯ ಮಹೋನ್ನತವಾದ ಮಹಲಿಗೆ ನೀತಿ ನೆಲೆಗಟ್ಟು, ಅನುಭವ ಆಧಾರ.
  —ಕೆ.ಎಸ್. ನಿಸಾರ್‌ಅಹಮದ್
- ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳಿದುಕೊಂಡಿರುತ್ತಾನೆ.
  —ಕುವೆಂಪು
- ಶ್ರೇಷ್ಠರು ಸಹಜೀವಿಗಳೂ ಶ್ರೇಷ್ಠರಾಗಬಹುದು ಎಂದು ಭಾವಿಸುತ್ತಾರೆ.
  —ಮಾರ್ಕ್ ಟ್ವೇನ್
- ಬಾಳು ಇರುವುದು ಬದುಕುವುದಕ್ಕಾಗಿಯೇ ಹೊರತು, ಬಳಲುವುದಕ್ಕಲ್ಲ. ಬದುಕಿನಿಂದ ಬೆಳೆಯಬೇಕು.
  —ಶಿವರಾಮ ಕಾರಂತ
- ಶೀಲ ಮತ್ತು ಬುದ್ಧಿವಂತಿಕೆಯನ್ನು ಒಂದುಗೂಡಿಸುವುದೇ ಶಿಕ್ಷಣದ ನಿಜವಾದ ಉದ್ದೇಶ.
  —ಮಾರ್ಟಿನ್‌ಲೂಥರ್‌ಕಿಂಗ್ ಜೂನಿಯರ್
- ದೇವಸ್ಥಾನಗಳಿಗಿಂತ ಗ್ರಂಥಾಲಯಗಳು ಮಹತ್ವವೆಂದು ನಮ್ಮ ಜನರಿಗೆ ಅನ್ನಿಸುವುದು ಯಾವಾಗ?
  —ಜಿ.ಎಸ್. ಶಿವರುದ್ರಪ್ಪ
- ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ.
  —ತರಾಸು
- ಮನಸ್ಸಿದ್ದರೆ ನಾವು ಅಂದುಕೊಂಡಿರುವ ಗುರಿ ಸಾಧಿಸಬಹುದು.
  —ಬುದ್ಧ